# ಪ್ರಾರ್ಥನೆ

## ಶ್ರೀ ಸರಸ್ವತೀ ಸ್ತೋತ್ರ

**ವೀಣಾಧರೇ ವಿಪುಲಮಂಗಲದಾನಶೀಲೇ**
**ಭಕ್ತಾರ್ತಿನಾಶಿನಿ ವಿರಿಂಚಿಹರೀಶವಂದ್ಯೇ ।**
**ಕೀರ್ತಿಪ್ರದೇಽಖಿಲಮನೋರಥದೇ ಮಹಾರ್ಹೇ**
**ವಿದ್ಯಾಪ್ರದಾಯಿನಿ ಸರಸ್ವತಿ ನೌಮಿ ನಿತ್ಯಮ್ ॥ ೧ ॥**

ವೀಣೆಯನ್ನು ಧರಿಸಿರುವ, ಅತ್ಯಧಿಕವಾದ ಮಂಗಳಗಳನ್ನು ಕರುಣಿಸುವ ಸ್ವಭಾವವುಳ್ಳ, ಕೀರ್ತಿಯನ್ನು ಕೊಡುವ, ಮನಸ್ಸಿನ ಎಲ್ಲಾ ಅಭಿಲಾಷೆಗಳನ್ನು ನೆರವೇರಿಸುವ, ಪೂಜ್ಯಳಾದ, ವಿದ್ಯೆಯನ್ನು ಕರುಣಿಸುವ ಸರಸ್ವತೀದೇವಿಯೇ, ನಿನ್ನನ್ನು ನಿತ್ಯವೂ ನಮಸ್ಕರಿಸುತ್ತೇನೆ.

**ಶ್ವೇತಾಬ್ಜಪೂರ್ಣ ವಿಮಲಾಸನಸಂಸ್ಥಿತೇ ಹೇ**
**ಶ್ವೇತಾಂಬರಾವೃತಮೋಹರಮಂಜುಗಾತ್ರೇ ।**
**ಉದ್ಯನ್ಮನೋಜ್ಞಸಿತಪಂಕಜಮಂಜುಲಾಸ್ಯೇ**
**ವಿದ್ಯಾಪ್ರದಾಯಿನಿ ಸರಸ್ವತಿ ನೌಮಿ ನಿತ್ಯಮ್ ॥ ೨ ॥**

ಶ್ವೇತ ಕಮಲದ ಆಸನದಲ್ಲಿ ಕುಳಿತಿರುವ, ಶ್ವೇತವಸ್ತ್ರವನ್ನು ಧರಿಸಿ ಮನೋಹರ ರೂಪಿನಿಂದ ಕಂಗೊಳಿಸುತ್ತಿರುವ, ಅರಳುತ್ತಿರುವ ಬಿಳಿದಾವರೆಯಂತೆ ಮುಗುಳ್ನಗೆ ಸೂಸುವ ಮುಖದಿಂದ ಕೂಡಿರುವ, ವಿದ್ಯೆಯನ್ನು ಕರುಣಿಸುವ ಸರಸ್ವತೀ ದೇವಿಯೇ, ನಿನ್ನನ್ನು ನಿತ್ಯವೂ ನಮಸ್ಕರಿಸುತ್ತೇನೆ.

**ಮಾತಸ್ತ್ವದೀಯ ಪದಪಂಕಜಭಕ್ತಿಯುಕ್ತಾಃ**
**ಯೇ ತ್ವಾಂ ಭಜಂತಿ ನಿಖಿಲಾನಪರಾನ್ವಿಹಾಯ ।**
**ತೇ ನಿರ್ಜರತ್ವಮಿಹ ಯಾಂತಿ ಕಲೇವರೇಣ**
**ಭೂವಹ್ನಿವಾಯುಗಗನಾಂಬು ವಿನಿರ್ಮಿತೇನ ॥ ೩ ॥**

ಅಮ್ಮಾ, ನಿನ್ನ ಪಾದಾರವಿಂದಗಳಲ್ಲಿ ಭಕ್ತಿಯುಳ್ಳವರು ಬೇರೆ ಎಲ್ಲವನ್ನೂ ಬಿಟ್ಟು ನಿನ್ನನ್ನೇ ಭಜಿಸುವರು. ಅಂತಹವರ ಪಂಚಭೂತಗಳಾದ ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳಿಂದ ನಿರ್ಮಿತವಾದ ಶರೀರದಲ್ಲಿ ಮುಪ್ಪು ಉಂಟಾಗುವುದಿಲ್ಲ.

**ಮೋಹಾಂಧಕಾರಭರಿತೇ ಹೃದಯೇ ಮದೀಯೇ**
**ಮಾತಃ ಸದೈವ ಕುರು ವಾಸಮುದಾರಭಾವೇ ।**
**ಸ್ವೀಯಾಖಿಲಾವಯವ ನಿರ್ಮಲಸುಪ್ರಭಾಭಿಃ**
**ಶೀಘ್ರಂ ವಿನಾಶಯ ಮನೋಗತಮಂಧಕಾರಮ್ ॥ ೪ ॥**

ಉದಾರಹೃದಯದವಳಾದ ತಾಯಿ, ಮೋಹದ ಕಗ್ಗತ್ತಲು ತುಂಬಿರುವ ನನ್ನ ಹೃದಯದಲ್ಲಿ ಯಾವಾಗಲೂ ನೆಲೆಸು. ನಿನ್ನ ಎಲ್ಲಾ ಅವಯವಗಳಿಂದ ಹೊರಹೊಮ್ಮುವ ನಿರ್ಮಲವಾದ ಪ್ರಭೆಯಿಂದ ನನ್ನ ಮನಸ್ಸಿನಲ್ಲಿರುವ ಅಂಧಕಾರವನ್ನು ಬೇಗನೆ ನಾಶಗೊಳಿಸು.

— ಪದ್ಮಪುರಾಣ

# ಸೂಕ್ತಿಪ್ರಭ

## ಗೀತಾಸೂಕ್ತಿಗಳು

**ಪ್ರಾ**ಣಿಗಳು ಹುಟ್ಟುವುದಕ್ಕೆ ಮೊದಲು ವ್ಯಕ್ತವಾಗುವುದಿಲ್ಲ, ಮಧ್ಯದಲ್ಲಿ ಹುಟ್ಟಿದ ಮೇಲೆ ವ್ಯಕ್ತವಾಗುತ್ತವೆ, ನಾಶವಾದ ಮೇಲೆ ಕೂಡ ವ್ಯಕ್ತವಾಗುವುದಿಲ್ಲ. ಈ ವಿಷಯದಲ್ಲಿ ಶೋಕವೇನು?

*(ಅಧ್ಯಾಯ ೨, ಶ್ಲೋಕ ೨೮)*

**ಗು**ಣವಿಲ್ಲದ ಸ್ವಧರ್ಮವು ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಶ್ರೇಯಸ್ಕರವಾದುದು. ಸ್ವಧರ್ಮದಲ್ಲಿ ಮರಣವು ಒಳ್ಳೆಯದು; ಪರಧರ್ಮವು ಭಯಂಕರವಾದದ್ದು.

*(ಅಧ್ಯಾಯ ೩, ಶ್ಲೋಕ ೩೫)*

**ಶ್ರ**ದ್ಧೆಯುಳ್ಳವನೂ ಜಿತೇಂದ್ರಿಯನೂ ಆದ ಮುಮುಕ್ಷುವು ಜ್ಞಾನವನ್ನು ಹೊಂದುತ್ತಾನೆ. ಜ್ಞಾನವನ್ನು ಪಡೆದು ಅವನು ಶೀಘ್ರದಲ್ಲಿಯೇ ಪರಮಶಾಂತಿಯನ್ನು ಪಡೆಯುತ್ತಾನೆ.

*(ಅಧ್ಯಾಯ ೪, ಶ್ಲೋಕ ೩೯)*

**ಸ**ಮಸ್ತ ಪ್ರಾಣಿಗಳಲ್ಲಿಯೂ ಸಮನಾಗಿರುವವನೂ, ಆ ನಶ್ವರ ವಸ್ತುಗಳಲ್ಲಿ ಅವಿನಾಶಿಯಾಗಿರುವವನೂ ಆದ ಪರಮೇಶ್ವರನನ್ನು ಯಾರು ನೋಡುತ್ತಾನೋ ಅವನೇ ನಿಜವಾಗಿ ನೋಡುತ್ತಾನೆ.

*(ಅಧ್ಯಾಯ ೧೩, ಶ್ಲೋಕ ೨೭)*

**ಯಾ**ವನಿಗೆ 'ನಾನು ಕರ್ತೃ' ಎಂಬ ಭಾವವಿರುವುದಿಲ್ಲವೋ ಯಾವನ ಬುದ್ಧಿಯು ಲಿಪ್ತವಾಗುವುದಿಲ್ಲವೋ ಅವನು ಈ ಲೋಕಗಳನ್ನು ಕೊಂದರೂ ಕೊಲ್ಲುವುದಿಲ್ಲ, ಬಂಧಿಸಲ್ಪಡುವುದಿಲ್ಲ. *(ಅಧ್ಯಾಯ ೧೮, ಶ್ಲೋಕ ೧೭)*